ಹುದ್ದೆಗಳನ್ನು ಭರ್ತಿ ಮಾಡಲು ಉದ್ದೇಶಿಸಿದ್ದೀರಿ ಎನ್ನುವುದನ್ನು ದಯವಿಟ್ಟು ತಿಳಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಯಾಹ್ಯ:– ಮಾನ್ಯ ಅಧ್ಯಕ್ಷಣಿಯವರೇ, ಈಗ ಸರ್ಕಾರದಿಂದ ಈ ವಿಚಾರವಾಗಿ ಪ್ರಾಮುಖ್ಯವಾಗಿ ವಿಶೇಷ ನೇಮಕಾತಿ ನಿಯಮಗಳನ್ನು ಹೊರಡಿಸಲಾಗಿದೆ. It has already been decided on certain basic issues on this point. There are 681 posts of physical instructors vacant and the Government has taken a decision to post one physical instructor for each upper primary school. The draft rules have been framed in this regard and recently the Cabinet has given its approval. The draft rules have been notifed in the Gazzette on 24–12–1992 calling for objections and suggestions. 24th of January next year is the last date. There onwards the Governemt will act very fast in this matter. The process will start from the next academic year and all the vacancies will be filled up.

ಶ್ರೀ ಕೆ. ಹರ್ಷಕುಮಾರ್‌ಗೌಡ:– ಮಾನ್ಯ ಅಧ್ಯಕ್ಷಣಿಯವರೇ, ಕಳೆದ ವರ್ಷಗಳಲ್ಲಿ ಎಷ್ಟು ಜನ ದೈಹಿಕ ಶಿಕ್ಷಕರುಗಳನ್ನು ಸರ್ಕಾರದವರು ನೇಮಕ ಮಾಡಿಕೊಂಡಿದ್ದಾರೆ ? ಹಾಗೆಯೇ ರಾಜ್ಯದಲ್ಲಿ ದೈಹಿಕ ಶಿಕ್ಷಣ ತರಬೇತಿ ಶಾಲೆಗಳು ಏನು ಇವೆ, ಅವುಗಳನ್ನು ಮುಚ್ಚುವ ಉದ್ದೇಶ ಏನಾದರೂ ಸರ್ಕಾರದ ಮುಂದೆ ಇದೆಯೇ ?

ಶ್ರೀ ಎಸ್.ಎಂ. ಯಾಹ್ಯ:– ಮಾನ್ಯ ಸದಸ್ಯರು ಹೇಳುವ ಪ್ರಶ್ನೆ ಇಲ್ಲಿ ಉದ್ಭವಿಸುವದಿಲ್ಲ. ಸರಕಾರದವರು ಅಪ್ಪರ್ ಪ್ರೈಮರಿ ಸ್ಕೂಲ್‌ಗಳಿಗೆ ಒಬ್ಬ ದೈಹಿಕ ಶಿಕ್ಷಕರನ್ನಾದರೂ ನೇಮಕ ಮಾಡ ಬೇಕೆಂದಿದ್ದೇವೆ. ಅದಕ್ಕೆ ಬೇಕಾದಂಥ ನೋಟಿಫಿಕೇಷನ್ ಕೊಟ್ಟಿದ್ದೇವೆ. ಸಚಿವ ಸಂಪುಟವು ಕೂಡ ಅದಕ್ಕೆ ಅಪ್ರೂವಲ್ ಕೊಟ್ಟಿದೆ. ಖಾಲಿ ಹುದ್ದೆಗಳನ್ನು ನೋಡಿಕೊಂಡು ಬರುವ ಶೈಕ್ಷಣಿಕ ವರ್ಷದಿಂದ ನೇಮಕಾತಿ ಮಾಡುವ ಹಾಗೆ ಮಾಡುತ್ತೇವೆ.

ಶ್ರೀ ಕೆ. ಹರ್ಷಕುಮಾರ್‌ಗೌಡ:– ನಾನು ಮಾನ್ಯ ಸಚಿವರಲ್ಲಿ ಈ ವರ್ಷದಲ್ಲಿ ಎಷ್ಟು ಜನ ದೈಹಿಕ ಶಿಕ್ಷಕರನ್ನು ನೇಮಕಾತಿ ಮಾಡಿಕೊಂಡಿದ್ದೀರಿ ಎಂದು ಕೇಳಿದ್ದೇನೆ. ಅದಕ್ಕೆ ಉತ್ತರ ಕೊಡುತ್ತಿಲ್ಲ. ಮಾನ್ಯ ಸಚಿವರು ನೇಮಕಾತಿಗಾಗಿ ವಿಶೇಷ ನೇಮಕಾತಿ ನಿಯಮಗಳನ್ನು ಮಾಡಿದ್ದೇವೆ, ಪಾಲಿಸಿ ಡಿಸಿಶನ್ ತೆಗೆದುಕೊಂಡಿದ್ದೇವೆ. ಗೆಜೆಟ್ ನೋಟಿಫಿಕೇಷನ್ ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ದಯಮಾಡಿ ಒಟ್ಟು ಎಷ್ಟು ದೈಹಿಕ ಶಿಕ್ಷಕರನ್ನು ನೇಮಕ ಮಾಡಿಕೊಂಡಿದ್ದೀರಿ ಎಂಬುದನ್ನು ತಿಳಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎಸ್.ಎಂ. ಯಾಹ್ಯ:– ನಾವು ದೈಹಿಕ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವಲ್ಲಿ ಸ್ಪೆಶಲ್ ರಿಕ್ರೂಟ್‌ಮೆಂಟ್ ಮಾಡುತ್ತೇವೆಂದು ಹೇಳಿದ್ದೇವೆ. ಮೊದಲು ಆಗಲಿಲ್ಲ ಅದಕ್ಕಾಗಿ ಈಗ ಬೇಗ ಮಾಡಲಿಕ್ಕೆ ನಾವು ಸಿದ್ಧಾಂತವೆಲ್ಲ ಮಾಡುತ್ತಿದ್ದೇವೆ. ಅದನ್ನು ತಾವುಗಳು ಅಪ್ರೀಶಿಯೇಟ್ ಮಾಡಬೇಕೆಂದು ಕೇಳಿಕೊಳ್ಳುತ್ತೇವೆ.

ಮೂಡಬಿದರೆಯ ವಿದ್ಯುತ್ ಉಪಕೇಂದ್ರ

(280) ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಮೂಡಬಿದರೆಯ ವಿದ್ಯುತ್ ಸಬ್‌ಸ್ಟೇಷನ್ನಿನ ಕಾರ್ಯ ಯಾವ ಹಂತದಲ್ಲಿದೆ ?

2) ಅದರ ಕೆಲಸಗಳು ನಿಧಾನವಾಗಲು ಕಾರಣಗಳೇನು ?

3) ಇದಕ್ಕೆ ಬೇಕಾಗಿರುವ ಟ್ರಾನ್ಸ್‌ಫಾರ್ಮರ್ ಬಂದಿರುವುದೇ ?

4) ಅದರ ಕೆಲಸ ಯಾವಾಗ ಪೂರ್ತಿಯಾಗುವುದು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು)

ಮೂಡಬಿದರೆಯ ವಿದ್ಯುತ್ ಸಬ್ ಸ್ಟೇಷನ್‌ನ ಕಾರ್ಯ ಪ್ರಗತಿ ಈ ಕೆಳಕಂಡಂತಿರುತ್ತದೆ.

ಅ) 110 ಕೆ.ವಿ. ಪ್ರಸರಣಾ ಮಾರ್ಗಕ್ಕೆ ಬೇಕಾದ ಸಾಮಗ್ರಿಗಳನ್ನು ಒದಗಿಸಿದ್ದು ಕೆಲಸವು ಪ್ರಗತಿಯಲ್ಲಿದೆ.

ಆ) ಸ್ಟೇಷನ್ನಿನ ಓ.ವಿ.ಎಸ್. ಮತ್ತು ಮೌಂಟಿಂಗ್ ಸ್ಟ್ರಕ್ಚರ್‌ಗಳ ಕಾರ್ಯ ಮುಗಿದಿರುತ್ತದೆ.

ಇ) ಕಂಟ್ರೋಲ್ ರೂಂನ ಕಟ್ಟಡದ ಕೆಲಸವನ್ನು ಹಿಂದೆ ವಹಿಸಿದ್ದ ಗುತ್ತಿಗೆದಾರರು ಬಿಟ್ಟುಬಿಟ್ಟಿದ್ದರಿಂದ ಹೊಸ ಗುತ್ತಿಗೆದಾರರಿಗೆ ಈಗ ಕೆಲಸ ವಹಿಸಿ, ಅದು ಪ್ರಗತಿಯಲ್ಲಿರುತ್ತದೆ.

ಈ) ಈ ಸ್ಟೇಷನ್‌ಗೆ ಬೇಕಾದ ಟ್ರಾನ್ಸ್‌ಫಾರ್ಮರ್‌ಗೆ ಕ್ರಯಾದೇಶ ನೀಡಿದ್ದು ಸಂಬಂಧಪಟ್ಟ ಸಂಸ್ಥೆಯವರು ಸರಬರಾಜು ಮಾಡಬೇಕಾಗಿರುತ್ತದೆ.

ಉ) 11 ಕೆ.ವಿ. ಸ್ವಿಚ್‌ಗೇರ್ ಸರಬರಾಜು ಮಾಡಿದ್ದು, ಕಂಟ್ರೋಲ್ ರೂಂ ಕಟ್ಟಡ ಪೂರೈಸಿದ ನಂತರ ಇವುಗಳನ್ನು ಅಳವಡಿಸಲಾಗುವುದು.

2) ಮೂಡಬಿದರೆ ಸಬ್‌ಸ್ಟೇಷನ್ ಸ್ಥಳವು ಅತಿ ಗಟ್ಟಿಯಾದ ಜಂಬು ಇಟ್ಟಿಗೆಗಳಿಂದ ಕೂಡಿರುವುದರಿಂದ ಸಮತಟ್ಟು ಮಾಡುವ ಕೆಲಸ ಸ್ವಲ್ಪ ನಿಧಾನವಾಯಿತು. ಜೊತೆಗೆ ಸ್ವಿಚ್‌ಗೇರ್ ಕಟ್ಟಡದ ಕೆಲಸವನ್ನು ವಹಿಸಿಕೊಂಡಿದ್ದ ಗುತ್ತಿಗೆದಾರರು ಕೆಲಸ ಮಾಡದೆ ಬಿಟ್ಟಿದ್ದರಿಂದ ಅದನ್ನು ಮತ್ತೆ ಬೇರೆ ಗುತ್ತಿಗೆದಾರರಿಗೆ ವಹಿಸಿಕೊಡಲಾಗಿದೆ. ಮಳೆ ಕಾರಣಗಳಿಂದ ಕೆಲಸ ಸ್ವಲ್ಪ ನಿಧಾನವಾಗಿರುತ್ತದೆ.

3) ಈ ಉಪಕೇಂದ್ರಕ್ಕೆ ಬೇಕಾದ 10 ಎಂ.ವಿ.ಎ. ಸಾಮರ್ಥ್ಯ ಟ್ರಾನ್ಸ್‌ಫಾರ್ಮರ್ ಸರಬರಾಜಿಗೆ ಕ್ರಯಾದೇಶ ನೀಡಲಾಗಿದ್ದು ಸಧ್ಯದಲ್ಲೇ ಸರಬರಾಜಾಗಲಿದೆ.

4) ಬಾಕಿ ಉಳಿದಿರುವ ಕೆಲಸಗಳನ್ನೆಲ್ಲಾ ಆದಷ್ಟು ಜಾಗ್ರತೆ ಪೂರೈಸಿ ಈ ವಿದ್ಯುತ್ ಕೇಂದ್ರವನ್ನು ಚಾಲನೆಗೊಳಿಸಲು ಎಲ್ಲಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.

ಶ್ರೀ ಕೆ. ಸೋಮಪ್ಪ ಸುವರ್ಣ:– ಸನ್ಮಾನ್ಯ ಉಪಾಧ್ಯಕ್ಷಿಣಿಯವರೆ, ಕಂಟ್ರಾಕ್ಟರ್ ದೋಷದಿಂದ ಈಗಾಗಲೇ ಕಮೀಷನ್ ಆಗಬೇಕಾಗಿದ್ದ ಮೂಡಬಿದಿರೆ ಸಬ್‌ಸ್ಟೇಷನ್ ಆಗದೇ ಜನರು ಬಹಳ ತೊಂದರೆಯಲ್ಲಿದ್ದಾರೆ. ಈಗ ಆ ಕಂಟ್ರಾಕ್ಟರ್ ಚೇಂಜಾಗಿ ಹೊಸ ಕಂಟ್ರಾಕ್ಟರ್ ಬಹಳ ವೇಗವಾಗಿ ಕೆಲಸ ಮಾಡುತ್ತಿದ್ದಾರೆ. ಟ್ರಾನ್ಸ್‌ಫಾರ್ಮರ್ ಬಾರದೇ ಇದ್ದರೆ ಪುನಃ ತೊಂದರೆಯಾಗುವ ಪ್ರಮೇಯ ಬರುತ್ತದೆ. ಆದಕಾರಣ ತಾವು ಆರ್ಡರ್ ಕೊಟ್ಟಿದ್ದೀರಿ, ಆದಷ್ಟು ಬೇಗನೆ ಟ್ರಾನ್ಸ್‌ಫಾರ್ಮರನ್ನು ತರಿಸುವ ಕೆಲಸ ತಾವು ಮಾಡಬೇಕೆಂದು ತಮ್ಮ ಹತ್ತಿರ ಬೇಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪಮೊಯಿಲಿ:– ಈಗಾಗಲೇ ಕೆಲಸ ಮುಗಿಯುವ ಹಂತದಲ್ಲಿದೆ. ಫೆಬ್ರವರಿ ತಿಂಗಳ ಅಂತ್ಯದೊಳಗೆ ಕೆಲಸ ಮುಗಿಯುತ್ತದೆ. ಆದರೂ ಕೂಡ ಮಾರ್ಚಿ 31ರೊಳಗಡೆ ಖಂಡಿತವಾಗಿ ಆ ಸಬ್‌ಸ್ಟೇಷನ್ ಕಮೀಷನ್ ನಾವು ಮಾಡುತ್ತೇವೆ.

ಶ್ರೀ ಕೆ. ಸೋಮಪ್ಪ ಸುವರ್ಣ:– ಒಂದು ಸಪ್ಲಿಮೆಂಟರಿ ಕೇಳುತ್ತೇನೆ. ಈಗಾಗಲೇ ಅಲ್ಲಿನ ಜನರಿಗೆ ಹೆಚ್ಚಿನ ಕನೆಕ್ಷನ್ ಕೊಡುವುದಿಲ್ಲ. ಕಾರಣ ಇಷ್ಟೆ. ಕೆಲವರು ತಮ್ಮ ಪಂಪ್‌ಸೆಟ್‌ಗಳಿಲ್ಲ ಹಾಳಾದುವು ಎಂದು ಕೆಇಬಿ ಮೇಲೆ ಕೇಸ್ ಮಾಡಿದ್ದಾರೆ. ಆದ್ದರಿಂದ ಅಲ್ಲಿ ಕೊಡಲಿಕ್ಕೆ ಶಕ್ತಿ ಬೇಕಾದಷ್ಟು ಇಲ್ಲವೆಂಬ ಕಾರಣದಿಂದ ಯಾವ ಕನೆಕ್ಷನ್ ಕೊಡುತ್ತಿಲ್ಲ. ಇದು ಆದಷ್ಟು ಬೇಗ ಆದರೆ ಆ ಜನರಿಗೆ ಬೆಳಕಿನ ಮತ್ತು ವಿದ್ಯುತ್ತಿನ ಸೌಲಭ್ಯ ಸಿಗಲಿಕ್ಕೆ ಸಾಧ್ಯವಾಗುತ್ತದೆ. ಸರ್ಕಾರ ಆ ಬಗ್ಗೆ ಕಳಕಳಿಯಿಂದ ಏನು ಕೆಲಸ ಮಾಡುತ್ತಾ ಇದೆ, ಅದಕ್ಕೆ ನಾನು ಅಭಿನಂದಿಸುತ್ತಿದ್ದೇನೆ. ಮಾರ್ಚಿಯೊಳಗಾದರೂ ಅದು ಸಿಗುವ ಹಾಗೆ ತಾವು ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷಿಣಿಯವರು:– ಆಗಲಿ ಎಂದು ಅವರು ಹೇಳಿದ್ದಾರಲ್ಲ, ಬಿಡಿ.

ರಾಜ್ಯದಲ್ಲಿ ಅಕ್ಷಯ ಯೋಜನೆಯ ಮೇಲಿನ ವೆಚ್ಚ

(91) ಶ್ರೀ ಜಿ.ಎಸ್. ಆಚಾರ್, (ಬೈಂದೂರು)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪ್ರಾಥಮಿಕ ಶಾಲಾ ಮಕ್ಕಳ ಹಾಜರಾತಿ ಹೆಚ್ಚಿಸಲು ರೂಪಿಸಲಾದ ಅಕ್ಷಯ ಯೋಜನೆಯ ಪ್ರಕಾರ ರಾಜ್ಯದ ವಿವಿಧ ಜಿಲ್ಲೆಗಳಲ್ಲಿನ ಎಷ್ಟೆಷ್ಟು ಮಕ್ಕಳಿಗೆ ಯಾವ ಯಾವ ತಿಂಗಳುಗಳಲ್ಲಿ ಎಷ್ಟೆಷ್ಟು ಹಣವನ್ನು ಪಾವತಿ ಮಾಡಲಾಗಿದೆ.

ಆ) ಬಾಕಿ ಇರುವ ಹಣವನ್ನು ಪಾವತಿ ಮಾಡಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳಾವುವು;

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು)

ಅ) ವಿವಿಧ ಜಿಲ್ಲೆಗಳಿಗೆ ಜೂನ್, ಜುಲೈ ಮತ್ತು ಆಗಸ್ಟ್ 92 ತಿಂಗಳುಗಳಲ್ಲಿ ಒಟ್ಟು ರೂ. 14,21,23,256 ಹಣ ಬಿಡುಗಡೆ ಮಾಡಲಾಗಿದೆ. ಜಿಲ್ಲಾವಾರು ಪಟ್ಟಿ ಲಗತ್ತಿಸಿದೆ.

ಆ) ಬಾಕಿ ಇರುವ ಹಣ ಬಿಡುಗಡೆ ಮಾಡುವ ಬಗ್ಗೆ ಸೂಕ್ತ ಕ್ರಮ ಪ್ರಾರಂಭಿಸಲಾಗಿದೆ.

ಅಕ್ಷಯ ಯೋಜನೆಯಲ್ಲಿ ಜೂನ್ 92ರಿಂದ ಆಗಸ್ಟ್ 92ರವರೆಗೆ ಫಲಾನುಭವಿಗಳ ಸಂಖ್ಯೆ ಹಾಗೂ ಹಂಚಲಾದ ಮೊಬಲಗು.

ಕ್ರ. ಸಂ.	ಜಿಲ್ಲೆ ಹೆಸರು	ಫಲಾನುಭವಿಗಳ ಸಂಖ್ಯೆ	ವಿತರಣೆ ಮಾಡಿರುವ ಹಣ ರೂ.ಗಳಲ್ಲಿ	ಫಲಾನುಭವಿಗಳ ಸಂಖ್ಯೆ	ವಿತರಣೆ ಮಾಡಿರುವ ಹಣ	ಫಲಾನುಭವಿಗಳ ಸಂಖ್ಯೆ	ವಿತರಣೆ ಮಾಡಿರುವ ಹಣ ರೂ.ಗಳಲ್ಲಿ
		(ಜೂನ್ 92)		(ಜುಲೈ 92)		(ಆಗಸ್ಟ್ 1992)	
1	2	3	4	5	6	7	8
1.	ಬೆಂಗಳೂರು ದಕ್ಷಿಣ	29278	532837	36172	704172	29391	565898
2.	ಬೆಂಗಳೂರು ಉತ್ತರ	27612	530977	30084	503136	30583	506661
3.	ಬೆಂಗಳೂರು (ಗ್ರಾ)	84138	1617128	111372	2612492	110726	2308097